**AEIJMR – Vol 11 – Issue 12 – December 2023 - ISSN - 2348 – 6724**

**ವರನಂದೀಕಲ್ಯಾಣ : ವಿನ್ಯಾಸ–ವಿಶ್ಲೇಷಣೆ ಮಹೇಶ. ಎಂ.**

**ಸಂಶೋಧಕರು**

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

ಕಳಲೆ ಚೆಲುವಾಂಬೆ ವಿರಚಿತ ವರನಂದೀಕಲ್ಯಾಣ ಒಂದು ವಿಶಿಷ್ಟವಾದ ಸಾಂಗತ್ಯಕೃತಿ. ಇದರಲ್ಲಿ ಏಳು ಸಂಧಿಗಳೂ, ೮೮೧ ಪದ್ಯಗಳೂ ಇವೆ. ಈ ಕೃತಿಯಲ್ಲಿ ದೆಹಲಿಯ ಮೊಗಲರ ಪಾದಶಾಹನ ಮಗಳಾದ ವರನಂದಿಗೂ ಮೇಲುಕೋಟೆ ಚೆಲುವರಾಯಸ್ವಾಮಿಗೂ ನಡೆದ ಮದುವೆ ವರ್ಣಿತವಾಗಿದೆ

ಮೊಗಲ್ ದೊರೆಗಳಲ್ಲಿ ಮಹಾಪರಾಕ್ರಮಿಯೂ, ಪ್ರಮುಖನೂ ಆದ ಪಾದಶಹನು ದೆಹಲಿಯಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಇವನಿಗೆ ಇಬ್ಬರು ಗಂಡು ಮಕ್ಕಳಿದ್ದರು. ಆದರೆ ಒಂದು ಹೆಣ್ಣು ಮಗು ಇಲ್ಲವಲ್ಲ ಎಂದು ತನ್ನ ನೋವನ್ನು ರಾಣಿಯ ಜೊತೆ ಹೇಳಿಕೊಂಡನು. ಅದೇ ನೋವಿನಲ್ಲಿದ್ದ ರಾಣಿಯೂ ಸಹ ಹೆಣ್ಣು ಮಗುವಿಗಾಗಿ ಹಂಬಲಿಸಿ, ತನ್ನ ಗಂಡನ ಜೊತೆಗೂಡಿ ಮನೆದೇವರನ್ನು ಪ್ರಾರ್ಥಿಸಿ, ಕಾಣಿಕೆ ಗಟ್ಟಿ ಮಲಗಿದಳು. ಒಂದು ದಿನ ಅವಳು ಒಂದು ವಿಶಾಲವಾದ ಕೊಳದಲ್ಲಿ ಒಂದು ಅರಳಿದ ಕಮಲದ ಮಧ್ಯೆ ಮಲಗಿದ್ದ ಮಗುವೊಂದನ್ನು ತಾನು ಎತ್ತಿ ತಂದು ಮೊಲೆಯೂಡಿಸಿ ಸಾಕುತ್ತಿದ್ದಂತೆ ಕನಸು ಕಂಡಳು. ಇದನ್ನು ಕೇಳಿ ತಿಳಿದ ರಾಜನು ಸಂತೋಷದಿಂದ ರಾಣಿಯೊಂದಿಗೆ ಕೂಡಿದನು. ಹಲವು ಮಾಸಗಳ ನಂತರ ರಾಣಿ ಗರ್ಭಧರಿಸಿ ಒಂದು ಹೆಣ್ಣುಮಗುವಿಗೆ ಜನ್ಮವಿತ್ತಳು. ರಾಜದಂಪತಿಗಳಿಗೆ ಅಮಿತಾನಂದವಾಯಿತು. ಆ ಮಗುವಿಗೆ 'ವರನಂದಿ' ಎಂದು ಹೆಸರಿಟ್ಟರು. ಮಗುವು ತಾಯಿಯ ಎದೆ ಹಾಲನ್ನು ಕುಡಿಯದೆ ಇರುವಾಗ ದಂಪತಿಗಳಿಗೆ ಗಾಬರಿಯಾಯಿತು. ಹೀಗಿರುವಾಗ ಒಂದು ದಿನ ದೊರೆಯ ಮುಂದೆ ಅಶರೀರವಾಣಿ "ಎಲೈದೊರೆಯೆ, ಈ ಮಗು ನಾಡಾಡಿ ಎಂದು ತಿಳಿಯಬೇಡ; ನಿನ್ನ ಪೂರ್ವದ ಪುಣ್ಯದ ಪ್ರತಿಫಲವಾಗಿ ಜನಿಸಿದೆ. ಆ ಪರವಾಸುದೇವನೇ ಇವಳನ್ನು ಮದುವೆಯಾಗುವನು. ಹಿರಿಯ ಬ್ರಾಹ್ಮಣ ಸ್ತ್ರೀಯರನ್ನು ಕರೆಸಿ ಅವರಿಂದ ಮಗುವಿಗೆ ಎದೆ ಹಾಲೂಡಿಸು" – ಎಂದು ನುಡಿಯಿತು. ದೊರೆಯು ಹಾಗೆ ಮಾಡಿ, ಆ ಬ್ರಾಹ್ಮಣ ಸ್ತ್ರೀಯರ ಜತೆಯೇ ಮಗುವನ್ನು ಕಳಿಸಿಕೊಟ್ಟನು.

ವರನಂದಿ ಬೆಳೆಯುತ್ತಿದ್ದ ಪರಿಯನ್ನು ದಂಪತಿಗಳು ನೋಡಿ ಸಂತೋಷಪಡುತ್ತಿದ್ದರು. ಮಗಳಿಗೆ ಐದು ವರ್ಷಗಳು ತುಂಬಿದ ನಂತರ ರಾಜನು ವಿದ್ಯೆ ಕಲಿಸಲು ಉಪಾಧ್ಯಾಯರನ್ನು ನೇಮಿಸಿದನು. ಸಂಗೀತ, ವೀಣೆ, ವೇಣು, ಮೃದಂಗ, ಸಾರಂಗಿ, ಭರತ, ತರ್ಕ, ಸಾಹಿತ್ಯಗಳಲ್ಲಿ ವರನಂದಿ ಪಾರಂಗತಳೆನಿಸಿದಳು.

ವರನಂದಿಗೆ ಬಾಲ್ಯಜಾರಿ ಯೌವನ ಮೈದೋರಿತು. ಪಾದಶಹನು ಮಗಳಿಗೆ ಮದುವೆಯನ್ನು ಮಾಡಲು ವರಾನ್ವೇಷಣೆಗೆ ಜನರನ್ನು ಬಿಟ್ಟನು. "ನನ್ನ ಮಗಳು ಒಪ್ಪಿದವನು ನನ್ನ ಅಳಿಯನಾದರೆ ಸರಿ, ಅವನಿಗೆ ದೇಶಕೋಶ ಉಡುಗೊರೆಗಳನ್ನಿತ್ತು ಉಪಚರಿಸುತ್ತೇನೆ. ಇಲ್ಲವಾದರೆ ಸೆರೆಮನೆಗೆ ಕಳುಹಿಸುತ್ತೇನೆ ಎಂದನು". ಇದನ್ನು ಅರಿತ ವರನಂದಿ ತಂದೆಯ ಬಳಿಗೆ ಬಂದು ಅಂದವಾಗಿರುವ ಬೊಂಬೆಗಳನ್ನು ತಂದು ಕೊಡುವಂತೆ ಕೇಳಿದಳು. ಮಗಳ ಬಯಕೆಯನ್ನರಿತ ರಾಜನು ಕಪ್ಪಕಾಣಿಕೆಗಳನ್ನು ವಸೂಲು ಮಾಡುವ ನೆಪದಲ್ಲಿ ದಿಗ್ವಿಜಯ ಹೊರಟನು. ಕೆಲವು ದಿನಗಳಲ್ಲಿ ಸೈನ್ಯವು ಯದುಗಿರಿಯ ಬಳಿಗೆ ಬಂದು ಸೇರಿತು. ಪಾದಶಾಹ ತನಗೆ ಬೇಕಾದವರೊಡಗೂಡಿ ಯದುಗಿರಿಯನ್ನು ಏರಿ ನಾರಾಯಣನ ದರ್ಶನ ಮಾಡಿದನು. ಅಲ್ಲಿಯ ಚೆಲುವನಾರಾಯಣನ ವಿಗ್ರಹವನ್ನು ನೋಡಿ, ತನ್ನ ಮಗಳು ತನಗೆ ಬೊಂಬೆಗಳನ್ನು ತರುವಂತೆ ಹೇಳಿದ್ದು ಜ್ಞಾಪಕವಾಗಿ, ಇದಕ್ಕೆ ಸರಿಸಮನಾದ ಬೊಂಬೆ ಬೇರೊಂದಿಲ್ಲ ಎಂದುಕೊಂಡನು. ಅದರಂತೆಯೇ ಚೆಲುವನಾರಾಯಣನ ವಿಗ್ರಹದ ಜೊತೆಗೆ, ದೇವಸ್ಥಾನದಲ್ಲಿದ್ದ ಬಗೆ ಬಗೆಯ ಬೊಂಬೆಗಳನ್ನು ತೆಗೆದುಕೊಂಡು ಹೋಗಿ ಮಗಳಿಗೆ ಕೊಟ್ಟನು.

ಚೆಲುವನಾರಾಯಣನ ವಿಗ್ರಹವನ್ನು ನೋಡಿದ ವರನಂದಿಗೆ ಮಹದಾನಂದವಾಯಿತು. ಆಕೆ ಆ ಗೊಂಬೆಯನ್ನು ಅಲಂಕರಿಸಿ, ಪೂಜಿಸಿ, ಮುದ್ದಿಸಿ, ತಾನು ಮಲಗುವ ಕೊಠಡಿಯಲ್ಲಿರಿಸಿಕೊಂಡಳು. ದಿನೇ ದಿನೇ ಗೊಂಬೆಯ ಮೇಲೆ ವರನಂದಿಗೆ ಪ್ರೀತಿ ಹೆಚ್ಚಾಯಿತು. ವರನಂದಿಯನ್ನು ಹರಿಯು ವರಿಸುವ ವಿಚಾರ ಹಾಗೂ ಹರಿಯನ್ನು ಹೇಗೆ ಪೂಜಿಸಿ ಒಲಿಸಿಕೊಳ್ಳಬೇಕೆಂಬ ವಿಧಾನ ಅವರ ಸಖಿಯರಿಂದ ತಿಳಿಯಿತು. ಅದರಂತೆ ವರನಂದಿ ಚೆಲುವನಾರಾಯಣನನ್ನು ಪೂಜಿಸತೊಡಗಿದಳು. ಕೆಲವು ಕಾಲದ ನಂತರ ಚೆಲುವನಾರಾಯಣನು ಅವಳ ಬಯಕೆಯನ್ನು ಹುಸಿಗೊಳಿಸದೆ ವರನಂದಿ ಮಲಗುತ್ತಿದ್ದ ಶಯ್ಯಾಗೃಹವನ್ನು ಸೇರಿ, ತನ್ನ ಪೂರ್ವವೃತ್ತಾಂತವನ್ನೆಲ್ಲಾ ವರನಂದಿಗೆ ತಿಳಿಸಿ, ಅವಳನ್ನು ಮೋಹಿಸಿ ಚುಂಬಿಸಿದನು. ಅನಂತರ ಇಬ್ಬರೂ ಸುರತದಲ್ಲಿ ತೊಡಗಿ ಮೈಮರೆತರು.

ಹೀಗೆ ವರನಂದಿಯ ಜೊತೆ ಸುರತ ಸುಖದಲ್ಲಿ ಮುಳುಗಿ ಹೋಗಿದ್ದ ಚೆಲುವನಾರಾಯಣನಿಗೆ ಯದುಗಿರಿಯಲ್ಲಿರುವ ತನ್ನ ಮಡದಿಯ ನೆನಪಾಯಿತು. ಯತಿವರರನ್ನು ನೆನಪಿಸಿಕೊಂಡು ಭಯವಾಯಿತು. ಭಕ್ತರ ನೆನಪಾಯಿತು. ಆಗ ಚೆಲುವನಾರಾಯಣನು ರಾಮಾನುಜಾಚಾರ್ಯರ ಕನಸಿನಲ್ಲಿ ಕಾಣಿಸಿಕೊಂಡು "ತುರುಕರು ಯದುಗಿರಿಯನ್ನು ಸೂರೈಗೈದೆನ್ನ ಸೆರೆಗೈದರು ದಿಳ್ಳಿಯೊಳಗೆ ತರಬರದೊಳು ವೈಷ್ಣವರನ್ನು ನೆರವಿ ಗೊಂಡಿರದೈ ತಂದೊಡನೆನ್ನ ಕರೆದೊಯ್ದು ಯದುಗಿರಿಯೊಳಗಿರ್ಪ ಸಿರಿಯೊಡವೆರೆಯಿವುದು" ಎಂದು ಭಿನ್ನವಿಸಿದನು. ರಾಮಾನುಜಾಚಾರ್ಯರು ಎಚ್ಚರಗೊಂಡು ತಾವು ಕಂಡ ಕನಸನ್ನು ಇತರರಿಗೆ ವಿವರಿಸಿ, ಸೈನ್ಯ, ದಾಸರು, ತಿರುಕುಲದವರು, ಮುಂತಾದವರೊಡಗೂಡಿ ಸಾವಿರಾರು ಸಂಖ್ಯೆಯಲ್ಲಿ ದಂಡುಗಟ್ಟಿ ದೆಹಲಿಯತ್ತ ಹೊರಟರು.

ಒಂದುಲಕ್ಷಕ್ಕೂ ಹೆಚ್ಚಿರುವ ವೈಷ್ಣವರ ದಂಡನ್ನು ದೆಹಲಿಯ ಜನರೆಲ್ಲಾ ನೋಡಿ ಗಾಬರಿಗೊಂಡರು. ಇದನ್ನು ತಿಳಿದ ಪಾದಶಾಹನು ಮೊದಲಿಗೆ ಯುದ್ಧ ಮಾಡಲು ಆಲೋಚಿಸಿದರೂ, ಅನಂತರದಲ್ಲಿ ಧೃತಿಗೆಡದೆ ರಾಮಾನುಜಾಚಾರ್ಯರನ್ನು ತನ್ನ ಅರಮನೆಯ ಸಭೆಗೆ ಆಹ್ವಾನಿಸಿ ತಾವು ದೆಹಲಿಗೆ ಬಂದ ವಿಚಾರವನ್ನು ತಿಳಿಯ ಬಯಸಿದನು. ಪಾದಶಾಹನ ಅರಮನೆಯಲ್ಲಿ ಸಭೆ ನಡೆಯುವಾಗ ಪಾದಶಾಹನ ಗುರು ಮತ್ತು ರಾಮಾನುಜಾಚಾರ್ಯರ ನಡುವೆ ಅನೇಕ ಪವಾಡಗಳು ನಡೆದವು. ಕೊನೆಯಲ್ಲಿ ರಾಮಾನುಜಾಚಾರ್ಯರು ಜಯಗಳಿಸಿದರು. ಇವರು ಸಾಮಾನ್ಯರಲ್ಲ ಎಂಬುದನ್ನು ಅರಿತ ಸಭೆಯು ಯತಿಗಳನ್ನು ಗೌರವಿಸಿತು. ಪಾದಶಾಹನು ರಾಮಾನುಜಾಚಾರ್ಯರನ್ನು ಕುರಿತು "ಪಿರಿಯರೆ ನಿಮ್ಮ ದೇವರು ನಮ್ಮ ಕಣ್ಗೆ ಗೋಚರವಲ್ಲ, ನೀವೆ ಪೇಳುವದು" ಎಂದೆನಲು ರಾಮಾನುಜರು ಅಂತರ್ದೃಷ್ಟಿಯಿಂದರಿತು, "ನಿಮ್ಮ ತನುಜೆಯ ಸಜ್ಜೆವನೆಯೊಳು ಮಿನುಗುವ ರನ್ನ ಮಂಚದ ಮೇಲೆ ನಮ್ಮ ಚೆಲುವನಾರಾಯಣನು ಮಲಗಿರ್ಪರ್" ಎಂದಾಗ, ರಾಜನು ಅಂತಃಪುರಕ್ಕೆ ಹೋಗಿ ತನ್ನ ಮಗಳಿಗೆ 'ಅವರ ದೇವರನ್ನು ಅವರಿಗೆ ಕೊಟ್ಟುಬಿಡು, ನಿನಗೆ ರತ್ನಗಳಿಂದ ಕೆತ್ತಿಸಿದ ದೇವರನ್ನು ಕೊಡುತ್ತೇನೆ; ಇಲ್ಲವಾದರೆ ಅವರಿಗೂ ನಮಗೂ ಕದನಗಳಾಗಿ ಅನಾಹುತಗಳಾಗುತ್ತವೆ' ಎಂದು ವಿನಂತಿಸಿದನು.

ತಂದೆಯ ಮಾತುಗಳನ್ನು ಕೇಳಿದ ವರನಂದಿ ಅವನ ಪಾದಗಳನ್ನು ಹಿಡಿದುಕೊಂಡು ನನ್ನ ಪ್ರಾಣಹೋದರೂ ಸರಿ ನಾನು ಚೆಲುವನಾರಾಯಣನನ್ನು ಕೊಡುವುದಿಲ್ಲ ಎಂದಳು. ವ್ಯರ್ಥಪ್ರಯತ್ನನಾದ ತಂದೆ ಸಭೆಗೆ ಹಿಂದಿರುಗಿ 'ಮಗಳು ಕೊಡಳು ನಿಮಗೆ ರತ್ನ ಖಚಿತವಾದ ದೇವರನ್ನು, ನೀವು ಕೇಳಿದಷ್ಟು ಹಣ ನೀಡುವೆನು ಎಂದನು'. ಆಗ ರಾಮಾನುಜಾಚಾರ್ಯರು 'ಕೋಟಿ ಕೊಟ್ಟರೂ ನಮಗೆ ಬೇಡ, ಬೂಟಕವಾಡದೆ ಕೂಡಲೆ ಬೊಂಬೆಯನ್ನು ಕೊಡಿಸು' ಎಂದಾಗ, ಪಾದಶಾಹನು ನಗುತ್ತಾ 'ಪ್ರಪಂಚದಲ್ಲಿ ಆ ದೇವರೇ ನಿಮಗೆ ದೊಡ್ಡದಾಗಿದ್ದರೆ, ನೀವೇ ಕರೆದು ನಿಮ್ಮ ಬಳಿಗೆ ಬರಿಸಿಕೊಳ್ಳಿ' ಎಂದು ಸವಾಲು ಹಾಕಿದನು. ಆಗ ರಾಮಾನುಜಾಚಾರ್ಯರು ತಮ್ಮ ಕಡೆಯವರೊಂದಿಗೆ ನಾನಾ ವಾದ್ಯಗಳನ್ನು ಬಾರಿಸುತ್ತ ಚೆಲುವನಾರಾಯಣನನ್ನು ಕುರಿತು ಹಾಡತೊಡಗಿದರು; ವಿಧ ವಿಧವಾಗಿ ಸ್ತುತಿಸಿದರು. ಈ ಸ್ತುತಿ ಚೆಲುವನಾರಾಯಣನಿಗೆ ಮುಟ್ಟಿತು. ತಾನು ಹೋಗದಿದ್ದರೆ ಯತಿಗಳು ನೊಂದುಕೊಳ್ಳುತ್ತಾರೆಂದೂ, ನನಗಿರುವ ಭಕ್ತವತ್ಸಲನೆಂಬ ಬಿರುದು ಹೋಗುತ್ತದೆಂದೂ ಚಿಂತಿಸಿ, ವರನಂದಿಯನ್ನು ಬಿಟ್ಟು ಯದುಗಿರಿಗೆ ಹೋಗಲು ತೀರ್ಮಾನಿಸಿದನು. ಈ ವಿಚಾರ ವರನಂದಿಯಲ್ಲಿ ಅತಿಯಾದ ದುಃಖವನ್ನುಂಟು ಮಾಡಿತು.

ಚೆಲುವನಾರಾಯಣನು ವಾದ್ಯದ ತಾಳಗಳಿಗೆ ಮನಸೋತು ಸಭೆಗೆ ಬಂದನು. ಇದನ್ನು ನೋಡಿ ಆಶ್ಚರ್ಯಗೊಂಡ ಪಾದಶಹನು 'ಮೂರುಲೋಕಗಳಿಗೂ ಹರಿಯೇ ದೊಡ್ಡವನು; ರಾಮಾನುಜರೇ ಶ್ರೇಷ್ಠ ಆಚಾರ್ಯರು' ಎಂದು ಪುರದಲ್ಲಿ ಡಂಗುರ ಹೊಯ್ಸಿದನು. ಆ ಮೂರ್ತಿಯನ್ನು ಎತ್ತಿ ಯತಿಗಳು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಶಿರವನ್ನಾಘ್ರಾಣಿಸಿದರು. ಅವನನ್ನು 'ನೀನು ನಿಜಕ್ಕೂ ಭಕ್ತವತ್ಸಲನಪ್ಪ' ಎಂದು ಕರೆದು ಸಂಪತ್ಕುಮಾರನೆಂದು ಕೊಂಡಾಡಿದರು. ಆಗಲೇ ಪಾದಶಹನು ಚೆಲುವನಾರಾಯಣನಿಗೆ ವೈರಮುಡಿಯನ್ನು ತರಿಸಿಕೊಟ್ಟು 'ನಾವು ನಿಮ್ಮ ದೇವರಿಂದ ಪಾವನರಾದೆವು; ನಿಮ್ಮ ದೇವರನ್ನು ಯದುಗಿರಿಗೆ ಕರೆದುಕೊಂಡು ಹೋಗಿರಿ' ಎಂದು ಬೀಳ್ಕೊಟ್ಟನು.

ಇತ್ತ ವರನಂದಿ ಪ್ರಿಯತಮನ ಅಗಲುವಿಕೆಯಿಂದ ಪರಿತಪಿಸತೊಡಗಿದಳು. ಮರ ಗಿಡ ಬಳ್ಳಿ ಗಿಳಿ ಹೂ ಚಂದ್ರ ಅಂಚೆ ಬನದೇವತೆ ನವಿಲು ಕೋಗಿಲೆಗಳನ್ನು ಕುರಿತು 'ನನ್ನ ನಲ್ಲನ ಕಂಡಿರೇ ಎಂದು ಕೇಳುವಳು'. ಮಗಳ ದುಃಖವನ್ನು ಕಂಡು ಮರುಗಿದ ಪಾದಶಹನು ವರನಂದಿಯನ್ನು ನಿನಗೆ ಏನು ಬೇಕು ಎಂದು ಕೇಳಿದಾಗ "ಯದುಶೈಲಾಧಿಪ ಬಟ್ಟಮೊಗದ ಚೆಲ್ವರಾಯನ ತರಿಸೀಗ ಕೊಟ್ಟರೆ ಸರಿ ಕೊಡದಿರಲು ಬಿಟ್ಟೀದೇಹವನೀಗಳೆ ಪೋಪೆನು ಮಟ್ಟು ಮೀರಿದಳೆನ್ನದಿರಿ" ಎಂದಳು. ಆಗ ಪಾದಶಹನು ಬೆಕ್ಕಸ ಬೆರಗಾಗಿ 'ದೈವ ಸಂಕಲ್ಪವ ಮೀರುವರುಂಟೆ' ಎಂದು ಯೋಚಿಸಿ, ಹಿಂದೆ ಅಶರೀರವಾಣಿ ನುಡಿದದ್ದನ್ನು ನೆನೆದುಕೊಂಡು, ಚೆಲುವನಾರಾಯಣನನ್ನು ತಂದು ನಿನಗೆ ಒಪ್ಪಿಸುತ್ತೇನೆ ಎಂದು ಮಗಳನ್ನು ಸಂತೈಸಿ, ಚತುರಂಗ ಸೇನಾ ಸಮೇತನಾಗಿ ಯದುಗಿರಿಯತ್ತ ಹೊರಟನು.

ಪಾದಶಹನು ಯುದ್ಧ ಮಾಡಲು ಯದುಗಿರಿಗೆ ಬಂದ ವಿಚಾರ ರಾಮಾನುಜಚಾರ್ಯರಿಗೆ ತಿಳಿದು ಈಗೇನು ಮಾಡುವುದು ಎಂದು ಆಲೋಚಿಸುತ್ತಿರುವಾಗ ಅಲ್ಲಿಗೆ ಚೆಲುವನಾರಾಯಣನು ಬಂದನು. ಅವನಿಗೆ ಈ ವಿಷಯ ತಿಳಿದ ಕೂಡಲೆ ದೇವೇಂದ್ರನನ್ನು ನೆನೆದನು. ಕೂಡಲೆ ಅಸಾಧ್ಯವಾದ ಬಿರುಗಾಳಿ ಬೀಸಿತು. ಪ್ರಳಯಕಾಲದ ಮಳೆ ಸುರಿಯಿತು. ಸುರತಾಳನ ಸೈನ್ಯವೆಲ್ಲಾ ಚೆಲ್ಲಾಪಿಲ್ಲಿಯಾಯಿತು. ದಿಗ್ಭ್ರಾಂತನಾದ ಪಾದಶಹ ತಾನು ದಂಡೆತ್ತಿ ಬಂದುದು ತಪ್ಪಾಯಿತೆಂದು ತಿಳಿದು, ತಮ್ಮ ಮಗಳನ್ನು ಚೆಲುವನಾರಾಯಣನಿಗೆ ಕೊಟ್ಟು ವಿವಾಹ ಮಾಡಲು ಒಪ್ಪಿದನು. ಅನಂತರದಲ್ಲಿ ಬಹಳ ವಿಜೃಂಭಣೆಯಿಂದ ಚೆಲುವನಾರಾಯಣ ಮತ್ತು ವರನಂದಿಯ ವಿವಾಹ ನೆರವೇರಿತು. ಇತ್ತ ರಾಮಾನುಜಚಾರ್ಯರು ತಾವು ನೆನೆದ ಕಾರ್ಯ ನೆರವೇರಿತೆಂದು ಸಂತಸಗೊಂಡರು. ನವದಂಪತಿಗಳು ಪಲ್ಲಕ್ಕಿಯಲ್ಲಿ ಕುಳಿತು ಬರುತ್ತಿರುವುದನ್ನು ದಾರಿಯುದ್ಧಕ್ಕೂ ಜನರು ನೋಡಿ ಸಂತೋಷಗೊಂಡರು. ಅನಂತರದಲ್ಲಿ ವರನಂದಿ ಮತ್ತು ಶ್ರೀದೇವಿಯ ನಡುವೆ ಕುಶಲೋಪಚಾರ ನಡೆಯಿತು. ಶ್ರೀದೇವಿಯು ವರನಂದಿಯನ್ನು ಕುರಿತು "ನನ್ನ ರಮಣನನ್ನು ಇಲ್ಲಿಗೆ ಮತ್ತೆ ಕರೆತಂದು ನನಗೆ ಉಪಕಾರಮಾಡಿದೆ, ಅದಕ್ಕೆ ನಾನು ನಿನಗೆ ಏನು ಕೊಟ್ಟರೂ ಕಡಿಮೆಯೇ" ಎಂದು ಹೇಳಿ ಅವಳಿಗೂ ಉಡುಗೊರೆ ಕೊಟ್ಟು ಹರಸಿದಳು. ವರನಂದಿ ತೊಟ್ಟಿದ್ದ ಮೊಗಲರ ಉಡುಪನ್ನು ಕಳಚಿ ಕರ್ನಾಟಕದ ಉಡುಪನ್ನು ಉಡಿಸಿ ಶೃಂಗರಿಸಿದಳು. ಆಗ ವರನಂದಿಯನ್ನು ಕಂಡ ಚೆಲುವನಾರಾಯಣನು "ಸಿಂಗಾರವಿದು ಚೆನ್ನಾದುದು" ಎಂದು ಹೊಗಳಿ "ಉರದೊಳು ಸಿರಿಯೆಂತು ನೆಲಸಿರ್ಪಳಂತೆನ್ನ ಸಿರಿಯಡಿಗಳ ಮಧ್ಯದೊಳು ಸನಿರುತ ಮಾಗಿರ್ದು ಭಕ್ತರ ಪೊರೆ" ಎಂದು ಹೇಳಿದನು.

**ಕೃತಿಯ ವಿಶ್ಲೇಷಣೆ**

ದೆಹಲಿಯ ಸುಲ್ತಾನ ಪಾದಶಹನ ಮಗಳು ವರನಂದಿ, ಮೇಲುಕೋಟೆಯ ಚೆಲುವನಾರಾಯಣನ ವಿವಾಹವನ್ನು ನಿರೂಪಿಸುವುದೇ ಈ ಕೃತಿಯ ಮುಖ್ಯ ಉದ್ದೇಶ. ಆದರೆ ಇದು ಐತಿಹಾಸಿಕವಾಗಿ ಎಷ್ಟು ಸಮಂಜಸವೆಂಬುದು ಚರ್ಚೆಗೆ ಗ್ರಾಸವಾದ ವಿಷಯ. 'ನಂದಿನಿ', 'ಬೇಬಿನಾಚ್ಚಿಯಾರ್' ಎಂಬ ಹೆಸರುಗಳಿಂದ ಪ್ರಸಿದ್ಧವಾಗಿರುವ ವರನಂದಿಯ ಪ್ರತಿಮೆಯು ಮೇಲುಕೋಟೆಯ ಚೆಲುವನಾರಾಯಣನ ದೇವಾಲಯದಲ್ಲಿ ಮೂಲಮೂರ್ತಿಯ ಪಕ್ಕದಲ್ಲಿದೆ. ಮತೀಯ ಘರ್ಷಣೆಗಳು ಸಂಭವಿಸಿದಾಗ ಹಿಂದೂ–ಮುಸ್ಲಿಂರಲ್ಲಿ ಭಾವೈಕ್ಯತೆಯನ್ನು ಹುಟ್ಟುಹಾಕಲು ಇಂಥ ಸಂಗತಿಗಳು ಬೆಳೆದು ಬಂದಿರಬೇಕು ಎಂದೆನಿಸುತ್ತದೆ. ಏಕೆಂದರೆ ಚೆಲುವಾಂಬೆಯ ಕಾಲಕ್ಕಾಗಲೇ ಮೈಸೂರು ಭಾಗದಲ್ಲಿ ಮುಸ್ಲಿಂರು ನೆಲೆಯೂರಿದ್ದರು. ಹೈದರಾಲಿ ಅಧಿಕಾರಗದ್ದುಗೆಯ ಕನಸುಕಾಣುತ್ತಿದ್ದ. ಇಂಥ ಒಂದು ಚಾರಿತ್ರಿಕ ಸಂದರ್ಭದಲ್ಲಿ ವರನಂದೀ ಕಲ್ಯಾಣ ಕೃತಿ ರಚನೆಯಾಗಿದೆ. ಹಾಗಾಗಿ ವರನಂದಿಯ ಜನನದಿಂದ ಆಕೆಯ ಕಲ್ಯಾಣದವರೆಗಿನ ಕಾವ್ಯವಾಹಿನಿಯಲ್ಲಿ ರಾಮಾನುಜಾಚಾರ್ಯರ ಪ್ರಸಕ್ತಿಯಿದೆ. ವೈಷ್ಣವ ಮತ್ತು ಮುಸ್ಲಿಂ ಧರ್ಮಗಳ ತಿಕ್ಕಾಟವಿದೆ. ವೈಷ್ಣವ ಧರ್ಮದ ಹಿರಿಮೆಯಿದೆ.

ಈ ಕಾವ್ಯದ ನಾಯಕಿ ವರನಂದಿ ದೆಹಲಿ ಸುಲ್ತಾನನ ಮಗಳು. ಆಕೆ ಕರ್ನಾಟಕದ ಮೇಲುಕೋಟೆಯ ಚೆಲುವನಾರಾಯಣನನ್ನು ವರಿಸಿದಳೆಂಬುದು ರಾಜಕೀಯವಾಗಿ, ಧಾರ್ಮಿಕವಾಗಿ, ಉತ್ತರ ಭಾರತದವರು ಈ ನಾಡಿನೊಳಗೆ ಸಂಬಂಧ ಬೆಸೆಯುವ ರೀತಿಯಾಗಿದೆ. ಸಮಾಜದಲ್ಲಿ ಗಂಡು ಶ್ರೇಷ್ಠ, ಹೆಣ್ಣು ಕನಿಷ್ಠ ಎಂಬ ಲಿಂಗ ತಾರತಮ್ಯವಿರುವುದರಿಂದ ತಂದೆ ತಾಯಿಗಳು ಗಂಡು ಮಗುವಿಗಾಗಿ ಆಶಿಸುವುದು ಸಾಮಾನ್ಯ. ಆದರೆ ಇಲ್ಲಿ ದೆಹಲಿಯ ಸುಲ್ತಾನ ಹೆಣ್ಣು ಮಗುವಿಗಾಗಿ ಹಂಬಲಿಸುವುದನ್ನು ಚೆಲುವಾಂಬೆ ಹೀಗೆ ವರ್ಣಿಸಿದ್ದಾಳೆ–

"ತನಯರೆಲ್ಲರು ನೋಡಿ ಸುರತಾಳತನಗೊರ್ವ । ತನುಜೆಯಿಲ್ಲೆಂದು ಚಿಂತಿಸುತ

ಮನದೊಳು ನೆನೆಯುತ ಪಲವೆಣಿಕೆಗಳನು । ಮನದನ್ನೆಯೊಡನೆ ಪೇಳಿದನು" ೧

ಹೆಣ್ಣು ಮಕ್ಕಳಿಲ್ಲದ ಮನೆ ಶೋಭಿಸದೆಂಬುದನ್ನು ಕುರಿತು –

"ನಳಿನಿ ಇಲ್ಲದ ತಣ್ಗೊಳದಂತೆ ಪೆಣ್ದುಂಬಿ । ಬಳಸದ ಪೂದೋಂಟದಂತೆ

ಕಳಹಂಸೆಯಿಲ್ಲದ ಕಮಳದಂತೆ ಮನೆಕಂ । ಗೊಳಿಸದು ಸುತೆಯಿಲ್ಲದಿರಲು" ೨

ʼರನಂದಿಯ ಹುಟ್ಟನ್ನು ಕುರಿತು –

"ಕೆಸರೊಳು ತಾವರೆ ಶುಕ್ತಿಯೊಳಗೆ ಮುತ್ತು । ಮಿಸುಗುತೆ ಪುಟ್ಟುವತೆರದಿ

ಎಸೆವ ಪೆಣ್ಮಣಿಯುದರದೊಳು ಜನಿಸಿದಳು । ಮಿಸುನಿವಣ್ಣದ ಬಾಲಕಿಯು" ೩

ವರನಂದಿ ಹುಟ್ಟಿದಾಗ ರಾಜನ ಸಂತಸ ಹೆಚ್ಚುತ್ತದೆ. ಗಂಡು ಮಗು ಹುಟ್ಟಿದಾಗ ಸಂಬಂಧಿಕರಿಗೆ, ಸ್ನೇಹಿತರಿಗೆ, ಊರಿನ ಜನರಿಗೆ ಸಿಹಿ ಹಂಚುವುದನ್ನೂ ಹೆಣ್ಣು ಮಗು ಹುಟ್ಟಿದಾಗ ಮೌನವಹಿಸುವುದನ್ನು ಸಮಾಜದಲ್ಲಿ ಕಾಣುತ್ತೇವೆ. ಆದರೆ ಸುಲ್ತಾನನು ಮಗಳು ಜನಿಸಿದಾಗ ಬ್ರಾಹ್ಮಣರಿಗೆ ಅಗಣಿತ ಚಿನ್ನವನ್ನು ದಾನ ಮಾಡಿದಂತೆ ವರ್ಣಿಸಿರುವುದು ಚೆಲುವಾಂಬೆಯ ಸ್ತ್ರೀಸಂವೇದನೆಗೆ ಸಾಕ್ಷಿ.

ವರನಂದಿ ತಾಯಿ ಹಾಲು ಕುಡಿಯದಿರುವುದು, ಬ್ರಾಹ್ಮಣಸ್ತ್ರೀ ಎದೆಹಾಲು ಕೊಟ್ಟಾಗ ಮಗು ಕುಡಿಯುವುದು ಇವೇ ಮೊದಲಾದ ಅಂಶಗಳು ವರನಂದಿ ಕಾರಣಿಕ ಶಿಶು ಎಂಬುದನ್ನು ಮನವರಿಕೆ ಮಾಡಿಕೊಡುತ್ತವೆ. ಹಾಗೆಯೇ ಬ್ರಾಹ್ಮಣ್ಯವೇ ಶ್ರೇಷ್ಠವೆಂಬ ನಂಬಿಕೆ, ವೈಷ್ಣವ ಧರ್ಮದಲ್ಲಿ ಕವಯಿತ್ರಿಗೆ ಇರುವ ಒಲವು ಕೂಡ ಶ್ರುತಪಡುತ್ತದೆ. ವರನಂದಿಗೆ ಸಂಗೀತ, ವೀಣೆ, ಕೊಳಲು, ಮೃದಂಗ, ಸಾರಂಗ ಹಾಗೂ ನರ್ತನ ಕಲಿಸಲಾಗುವುದು. ಇದು ಅರಮನೆಯ ಹೆಣ್ಣುಮಕ್ಕಳಿಗೆ ವಿವಿಧ ಕಲೆಗಳಲ್ಲಿ ಶಿಕ್ಷಣ ನೀಡುತ್ತಿದ್ದುದರ ಕುರುಹಾಗಿದೆ.

ವರನಂದಿಯ ರೂಪು ಲಾವಣ್ಯಗಳನ್ನು ಕುರಿತು –

"ಮರಿದುಂಬಿಗುರುಳಿನ ಮರಿಹುಲ್ಲೆಗಣ್ಣಿನ । ಮರಿಗೋಗಿಲೆಯ ನುಣ್ಚರದ

ಮರಿಸೋಗೆ ಮಡಿದಾಳ್ದ ವರನಂದಿಗೆ ಕಿರುಹರೆಯವು ಕಡುರಯ್ಯಮಾಯ್ತು" ೪

ಎಂದು ನಖಶಿಖಾಂತವಾಗಿ ವರ್ಣಿಸಲಾಗಿದೆ. ಆದರೆ ಇದು ಪುರುಷ ದೃಷ್ಟಿಯ ವರ್ಣನೆಯಾಗಿದೆ. ಇಲ್ಲೆಲ್ಲ ಪುರುಷ ರಚಿತ ಕಾವ್ಯಗಳನ್ನೇ ಚೆಲುವಾಂಬೆ ಮಾದರಿಯಾಗಿ ಇಟ್ಟುಕೊಂಡಿರುವಂತೆ ಭಾಸವಾಗುತ್ತದೆ. ಸುಲ್ತಾನ ತನ್ನ ಮಗಳಿಗೆ ಸೂಕ್ತ ವರನನ್ನು ಹುಡುಕುವಾಗ ಸಾಗರದಂತೆ ಗಂಭೀರನೂ, ಉದಾರನೂ, ಧೀರನೂ ಆಗಿರಬೇಕೆಂದು ನಿರೀಕ್ಷಿಸುವುದು ಆ ಕಾಲದಲ್ಲಿದ್ದ ಆದರ್ಶ ವರನ ಲಕ್ಷಣಗಳಾಗಿರಬಹುದು. ತಂದೆ ಮಗಳ ವಾತ್ಸಲ್ಯ ಕೂಡ ಇಲ್ಲಿ ವಿಶಿಷ್ಟವಾಗಿ ಪಡಿಮೂಡಿದೆ.

"ಎನ್ನಮ್ಮ ಬಾರೆನ್ನ ಕಣ್ಣಪುಣ್ಯವೆ ಬಾ । ರೆನ್ನ ಸಂಜೀವದ ಕಣಿಯೆ

ನಿನ್ನನು ಕಾಣದೆಂತಿರ್ದೆನು ಬಾರೆಂದು । ಕನ್ನೆಯ ತಳ್ಕೈಸಿದನು" ೫

ದೆಹಲಿ ಸುಲ್ತಾನನು ಕನ್ನಡನಾಡಿಗೆ ಯುದ್ಧಕ್ಕೆ ಬಂದಾಗ ಚೆಲುವನಾರಾಯಣನ ಮೂರ್ತಿಯನ್ನು ಮಗಳಿಗೆ ಆಟಿಕೆಯಾಗಿ ತೆಗೆದುಕೊಂಡು ಹೋಗುವ ಪ್ರಸಂಗವು ಈ ನಾಡಿನ ಸಂಪತ್ತನ್ನು ಪರಕೀಯರು ಸೂರೆಗೊಂಡಿದ್ದರ ಸಂಕೇತವಿರಬಹುದು. ಜೊತೆಗೆ ಒಂದು ಧರ್ಮದ ದೇವರನ್ನು ಮತ್ತೊಂದು ಧರ್ಮದವರು ನೋಡುವ ದೃಷ್ಟಿ ಭಿನ್ನವಾಗಿರುವುದನ್ನು ತಿಳಿಸುತ್ತದೆ.

ಮಹಾದೇವಿಯಕ್ಕ ಚೆನ್ನಮಲ್ಲಿಕಾರ್ಜುನನನ್ನು ಪತಿಯಾಗಿ ಭಾವಿಸಿದಂತೆ ವರನಂದಿಯೂ ಚೆಲುವನಾರಾಯಣನ ಮೂರ್ತಿಯನ್ನು ಪ್ರೇಮಭಾವದಿಂದ ಪೂಜಿಸುತ್ತಾಳೆ. ಒಂದು ದಿನ ಲೋಕವೆಲ್ಲ ಮಲಗಿರುವ ವೇಳೆಯಲ್ಲಿ ವರನಂದಿಯ ಮುಂದೆ ಚೆಲುವನಾರಾಯಣ ಪ್ರತ್ಯಕ್ಷನಾಗುತ್ತಾನೆ. ಆಗ ಆಕೆ "ಕೋರಿವೆಣ್ಣಳನಿಂತುಗಾರುಗೈವರೆ ಪೇಳಾರುಮಿಲ್ಲದ ವೇಳೆಯೊಳ್"೬ ಎಂದು ಸ್ವಾಭಿಮಾನ ಮೆರೆಯುತ್ತಾಳೆ. ಆತನೇ ವಾಸುದೇವ ಎಂದು ತಿಳಿದಾಗಲೂ ದೇವ ನನ್ನಲ್ಲಿ ದಯೆಯುಂಟಾದರೆ ವಿವಾಹ ಮಾಡಿಕೊಳ್ಳದೆ ಬರುವುದಿಲ್ಲ ಎಂದು ಹೇಳುವ ಮಾತು ಹೆಣ್ಣಿನ ಆತ್ಮಗೌರವವನ್ನು ಎತ್ತಿ ಹಿಡಿಯುವಂಥದ್ದು.

ಚೆಲುವನಾರಾಯಣನು ವರನಂದಿಯೊಡನೆ ಸಂತಸದಿಂದಿರುವಾಗ ಯದುಗಿರಿಯ ಒಡತಿಯ ನೆನಪಾಗುತ್ತದೆ. ಬಹುಪತ್ನಿತ್ವ ರೂಢಿಯಲ್ಲಿದ್ದುದರಿಂದ ಕವಿಗಳು ದೇವರಿಗೂ ಬಹುಪತ್ನಿಯರನ್ನು ಸೃಷ್ಟಿಸುವುದು ಜಾನಪದದಿಂದ ಶಿಷ್ಟಕಥೆಗಳವರೆಗೆ ಕಂಡುಬರುತ್ತದೆ. ಚೆಲುವನಾರಾಯಣನು ರಾಮಾನುಜರಿಗೆ ಕನಸಿನಲ್ಲಿ ಕಾಣಿಸಿಕೊಂಡು ತನ್ನನ್ನು ಸುಲ್ತಾನನಿಂದ ಬಿಡಿಸಿಕೊಂಡು ಹೋಗಬೇಕೆಂದು ಕೋರುತ್ತಾನೆ.

"ತರಬರದೊಳು ವೈಷ್ಣವರನು ನೆರವಿಗೊಂ । ಡಿರದೈ ತಂದೊಡನೆನ್ನ

ಕರೆದೊಯ್ದು ಯದುಗಿರಿಯೊಳಗಿರ್ಪ ಸಿರಿಯೊಡ । ವೆರೆಯಿಪುದೆಂದು ಪೇಳಿದನು" ೭

ವರನಂದಿಗಾದರೂ ಆತನನ್ನು ಕಳಿಸುವ ಇಚ್ಛೆಯಿಲ್ಲ. ಆಗ ರಾಮಾನುಜಾಚಾರ್ಯರು ಚೆಲುವನಾರಾಯಣನನ್ನು ಸ್ತುತಿಸಿ ಯದುಗಿರಿಗೆ ತೆರಳುವಂತೆ ಮಾಡುತ್ತಾರೆ. ಇದು ಯದುಗಿರಿಯಲ್ಲಿ ನಾರಾಯಣನು ಪ್ರತಿಷ್ಠಾಪನೆಯಾದ ಸಂಕೇತವಿರಬಹುದು. ರಾಮಾನುಜರು ಸುಲ್ತಾನನ ಸಭೆಗೆ ಹೋದಾಗ ಫಕೀರನಿಗೆ ಗೌರವ ತೋರಲಿಲ್ಲವೆಂಬ ಕಾರಣಕ್ಕಾಗಿ ಆತ ಕೆಂಡದ ಮಳೆ ಸುರಿಸುತ್ತಾನೆ, ಹಾವಿನ ವಿಷ ಬಿಡುತ್ತಾನೆ. ಇದಕ್ಕೆ ಪ್ರತಿಯಾಗಿ ರಾಮಾನುಜಾಚಾರ್ಯರು ಗರುಡನ ನೆರವಿನಿಂದ ತಡೆ ಒಡ್ಡುತ್ತಾರೆ. ಆಗ ಹರಿಯೇ ದೊಡ್ಡವನೆಂದು ಫಕೀರ ಒಪ್ಪಿಕೊಳ್ಳುವ ಮೂಲಕ ಕವಯಿತ್ರಿ ವೈಷ್ಣವ ಧರ್ಮದ ಮೇಲ್ಮೆಯನ್ನು ಸಾರಿದ್ದಾಳೆ.

ಚೆಲುವನಾರಾಯಣನು ವರನಂದಿಯನ್ನು ಅಗಲಿದ ನಂತರ ಅವಳ ವಿರಹ ದುಃಖಕ್ಕೆ ಕೊನೆಯೆ ಇರಲಿಲ್ಲ, ಕಾಮನನ್ನು ಶಪಿಸಿದಳು; ಪ್ರಯೋಜನವಾಗಲಿಲ್ಲ; ಮಹಾದೇವಿಯಕ್ಕ ಪಕ್ಷಿಸಮೂಹವನ್ನು ಕುರಿತು ಚೆನ್ನಮಲ್ಲಿಕಾರ್ಜುನನನ್ನು 'ನೀವೂ ಕಂಡಿರಾ, ನೀವೂ ಕಂಡಿರಾ' ಎಂದು ಪರಿಪರಿಯಾಗಿ ಬೇಡುವ ರೀತಿಯಲ್ಲಿಯೇ, ವರನಂದಿಯು ಪಕ್ಷಿಸಮೂಹ ಹಾಗೂ ಬನದೇವತೆಯನ್ನು ಬೇಡುವ ರೀತಿ ಓದುಗರಲ್ಲಿ ಕರುಣರಸವನ್ನು ಸ್ಫುರಿಸುತ್ತದೆ.

"ಅಂಚೆಗಳಿರ ಪೇಳಯಂಜವೇಡೆನ್ನನು । ವಂಚಿಸಿ ಪೋದ ವಲ್ಲಭನ

ಕೋಗಿಲೆಗಳಿರ ಕೋಕೋಯೆಂದು ಕೂಲದಿರಿ । ಮೇಗಡೆಯೊಳಗಿರ್ಪುದಕೆ

ಅರಗಿಣಿಗಳಿರ ಎನ್ನರಸನೆಲ್ಲಿದನದ । ನರುಹದಿರ್ದೊಡೆ ಬಿಡೆ ನಿಮ್ಮ

ಪರಮೆಗಳಿರ ಪೇಳ ಪಂಕಜನಯನನ । ಪರಿಮಳಪುಸುರ್ಗಂಪುಗಳ" ೮

ವಿರಹ ದುಃಖದಿಂದ ವರನಂದಿ ಪರಿತಪಿಸುತ್ತಿರುವಾಗ ತಂದೆಯು ಮಗಳನ್ನು ಸಂತೈಸುತ್ತ ನಿನಗೇನು ಬೇಕು ಕೇಳು ತಂದೊಪ್ಪಿಸುವೆ ಎನ್ನುವಲ್ಲಿ, ವರನಂದಿಯು ಚೆಲುವನಾರಾಯಣನನ್ನು ಗಾಢವಾಗಿ ಪ್ರೀತಿಸುತ್ತಿದ್ದಳು ಎಂಬುದಕ್ಕೆ ಈ ಪದ್ಯ ಉತ್ತಮ ನಿದರ್ಶನ.

"ಬಟ್ಟಮೊಗದ ಚೆಲ್ವರಾಯನ ತರಿಸೀಗ । ಕೊಟ್ಟರೆ ಸರಿ ಕೊಡದಿರಲು

ಬಿಟ್ಟೇ ದೇಹವನೀಗಳೆ ಪೋಪೆನು । ಮಟ್ಟು ಮಿರಿದಳೆನ್ನದಿರಿ.

ಕತ್ತುರಿ ತಿಲಕದ ಚಿತ್ತವಲ್ಲಭನೆನ । ಗಿತ್ತೊಡೆ ಸರಿ ತಂದೀಯದೊಡೆ

ಕುತ್ತಿಕೆಡಪುವೆನೀಯೊಡಲನು ತಳುವದೆ । ಪತ್ತೆಸಾರುವೆ ಯದುಗಿರಿಗೆ" ೯

ವರನಂದಿಯ ವಿರಹವನ್ನು ಶೃಂಗಾರಭಾವದ ಅಭಿವ್ಯಕ್ತಿಗಾಗಿ ಬಳಸಿಕೊಳ್ಳಲಾಗಿದೆ. ಮಗಳು ಇಚ್ಛೆಪಟ್ಟ ವರನೊಂದಿಗೆ ವಿವಾಹ ಮಾಡಬೇಕೆಂದು ಸುಲ್ತಾನನು ಬಯಸುವುದು ಚೆಲುವಾಂಬೆಯ ಕೃತಿಯಲ್ಲಿ ಮಾತ್ರ ಕಾಣಸಿಗುವ ಅಂಶವಾಗಿದೆ. ವರನಂದಿಯ ವಿವಾಹ ವರ್ಣನೆಯಲ್ಲಿ ಕವಯಿತ್ರಿಯ ವರ್ಣನಾ ಸಾಮರ್ಥ್ಯ ಸ್ಫುಟಗೊಂಡಿದೆ.

ವರನಂದಿಯನ್ನು ಗಂಡನ ಮನೆಗೆ ಕಳಿಸುವಾಗ ಆಕೆಯ ತಾಯಿಯ ಮೂಲಕ ಚೆಲುವಾಂಬೆ ಹದಿಬದೆಯ ಧರ್ಮವನ್ನು ಬೋಧಿಸುತ್ತಾಳೆ. ಅತ್ತೆಮಾವಂದಿರಿಗೆ, ಭಾವಮೈದುನರಿಗೆ, ಒಲುಮೆಯಿಂದ, ಲಜ್ಜಾಭಾವದಿಂದ ಹತ್ತಿರದಲ್ಲಿ ನಿಲ್ಲದೆ ಉತ್ತರವನ್ನು ಕೊಡು, ಗಂಡನ ಸಹಮತದಿಂದ ಅವರನ್ನು ಉಪಚರಿಸು, ಹತ್ತು ದಿಕ್ಕಿನಲ್ಲಿಯೂ ಜಪವನ್ನು ಹೆಚ್ಚಿಸು, ಗಂಡನಲ್ಲಿ ಪ್ರೀತಿಯಿಂದಿರು, ಅನ್ಯರನ್ನು ಕಣ್ಣೆತ್ತಿಯೂ ನೋಡಬೇಡ, ಹೆತ್ತವರಲ್ಲಿ ಉತ್ತಮ ಸತಿಯಾಗಿ ಬಾಳು ಎಂದು ಮೊದಲಾಗಿ ಹೇಳಿರುವಲ್ಲಿ ಹೆಣ್ಣಿಗೆ ಆ ಕಾಲದಲ್ಲಿದ್ದ ಸಾಮಾಜಿಕ ನಿರ್ಬಂಧಗಳೇನೆಂಬುದು ವೇದ್ಯವಾಗುತ್ತದೆ. ಇಲ್ಲೆಲ್ಲ ನೀತಿಮಾತುಗಳು ಅನ್ವಯಿಸುವುದು ದಾಂಪತ್ಯ ಜೀವನಕ್ಕೆ ಅಡಿಯಿಡುತ್ತಿರುವ ಹೆಣ್ಣಿಗೇ ಹೊರತು ಗಂಡಿಗಲ್ಲವೆಂಬುದನ್ನು ಗಮನಿಸಬಹುದು.

ವರನಂದಿಯ ತಾಯಿಯು ಬಂಗಾರದಂತಹ ನನ್ನ ಮಗಳನ್ನು ಬೊಂಬೆಗೆ ಕೊಟ್ಟು ಮದುವೆ ಮಾಡಬೇಕಲ್ಲಾ ಎಂದು ದುಃಖದಿಂದ ಚಿಂತಿಸುತ್ತಿರುವಾಗ, ವರನಂದಿಯು ಅಮ್ಮನನ್ನು ಕುರಿತು – "ನಿಮ್ಮ ಭಾಗ್ಯಕೆ ಸರಿಯುಂಟೆ ಕೇಳೆನ್ನನು । ಬೊಮ್ಮನ ಪೆತ್ತನಿಗಿತ್ತು ನಿಮ್ಮಳಿಯನ ಮಾಡಿಕೊಂಡಿರಲದರಿಂದ । ಹಮ್ಮು ಬೇರೊಂದುಂಟೇನಮ್ಮ" ೧೦ – ಎಂದು ಹೇಳುವಳು.

ಮಾತೃ ಪ್ರಧಾನವಾಗಿದ್ದ ಕೌಟುಂಬಿಕ ವ್ಯವಸ್ಥೆಯು ಪಿತೃ ಪ್ರಧಾನವಾಗಿ ಪಲ್ಲಟಗೊಂಡ ಬಳಿಕ ಹೆಣ್ಣಿಗೆ ತಾಯಿಯ ಮನೆಯಲ್ಲಿ ವಿವಾಹ ನಂತರದಲ್ಲಿ ಸ್ಥಾನವಿಲ್ಲದಂತಾಯಿತು. ಆಕೆ ಶಾಶ್ವತವಾಗಿ ಗಂಡನ ಮನೆಗೆ ಹೋಗುವುದು ಅನಿವಾರ್ಯವಾಯಿತು. ಹೀಗಾಗಿ ಮದುವೆಯಲ್ಲಿ ತಾಯಿ ಮಗಳ ವಿದಾಯ ಅತ್ಯಂತ ವೇದನೆಯ ಸನ್ನಿವೇಶ. ಈ ಕುರಿತು ಜನಪದದಲ್ಲಿ ವಿಫುಲವಾದ ಗೀತೆಗಳಿವೆ. ಚೆಲುವಾಂಬೆ ಮಹಿಳೆಯಾದ ಕಾರಣ ಈ ಸಂದರ್ಭದ ನೋವನ್ನು ಬಲ್ಲವಳಾಗಿದ್ದಾಳೆ.

"ಪೆತ್ತ ಪೆಣ್ಮಕ್ಕಳ ಪೆರರಿಗೆ ಕೊಡುವವೂ । ಲೆತ್ತು ಬುದ್ಧಿಯ ಬಿದಿ ತಾನು ಚಿತ್ತರಿಸಿರುವನವನನು ಸುದತಿಯರ । ಪೆತ್ತರ ಗೋಳೊತ್ತರಿಸದೆ" ೧೧ ಈ ಪದ್ಯ ಜನಪದರಲ್ಲಿ ಬರುವ 'ಹೆಣ್ಣು ಹಡೆಯಲಿ ಬ್ಯಾಡ ಹೆರವರಿಗೆ ಕೊಡಬ್ಯಾಡ' ಎಂಬ ತ್ರಿಪದಿಗೆ ಸಂವಾದಿಯಾಗಿದೆ.

"ಒಂದು ತಿಂಗಳು ಗಂಡನೂರೊಳಗಿರು ಮ । ತ್ತೊಂದು ತಿಂಗಳು ತೌರುಮನೆಗೆ ಬಂದಿರುವುದು ತಾಯೆ ಕರೆಯಲಟ್ಟುವೆನು ನಾ । ನೆಂದು ನುಡಿದಳಾಯತಾಕ್ಷಿ" ೧೨ ಎಂದಿರುವಲ್ಲಿ ಮಾತೃವಾತ್ಸಲ್ಯ ಮಡುಗಟ್ಟಿದೆ. ಸುಲ್ತಾನ ವರನಂದಿಯನ್ನು ಕರೆತಂದು ರಾಮಾನುಜಾಚಾರ್ಯರಿಗೆ ಒಪ್ಪಿಸುವುದು, ವರನಂದಿ ತನ್ನ ಪೂರ್ವ ಧರ್ಮದ ಉಡುಪು ತೊರೆದು ಬೇರೆ ಉಡುಪು ಧರಿಸುವುದು ಮೊದಲಾದ ಅಂಶಗಳಲ್ಲಿ ಮತಾಂತರದ ಪರಿಣಾಮವನ್ನು ಊಹಿಸಬಹುದು.

"ಮೊಗಲರ ಶಿಸ್ತು ರಂಜಿಪುದೊ ಕರ್ನಾಟಕದ । ಸೊಗಸು ರಮ್ಯವೊ ನೋಡೆಂದು ಸುಗುಣೆಗೆ ಮಂಡೆಯಕಟ್ಟಿ ಕತ್ತುರಿಯಿಟ್ಟು । ಬಗೆಬಗೆ ತೊಡವನು ತೊಡಿಸಿ" ೧೩ ವರನಂದಿಯೇ ಪೂರ್ವ ಭವದಲ್ಲಿ ಸತ್ಯಭಾಮೆಯಾಗಿದ್ದಳೆಂದು ಜನ್ಮಾಂತರದ ಕಥೆಯನ್ನು ಹೆಣೆಯಲಾಗಿದೆ. ಹಾಗಾಗಿ ಚೆಲುವನಾರಾಯಣನ ಪತ್ನಿ ಶ್ರೀದೇವಿಯು ಯಾವುದೇ ಪ್ರತಿಭಟನೆ ಇಲ್ಲದೆಯೆ ವರನಂದಿಯನ್ನು ಬರಮಾಡಿಕೊಳ್ಳುತ್ತಾಳೆ. ಪುರುಷಪ್ರಧಾನ ಸಮಾಜ ಬಹುಪತ್ನಿತ್ವ ವ್ಯವಸ್ಥೆಗೆ ಹೆಣ್ಣುಮಕ್ಕಳನ್ನು ಸಜ್ಜುಗೊಳಿಸಿದ ರೀತಿ ಇದು. ಕೆಲವು ಕೃತಿಗಳಲ್ಲಿ ಬೇಬಿ ನಾಚ್ಚಿಯಾರ್ ಅಥವಾ ವರನಂದಿಯು ಅಂತ್ಯದಲ್ಲಿ ಐಕ್ಯವಾದಂತೆ ಚಿತ್ರಿಸಲಾಗಿದೆ. ಆದರೆ ಚೆಲುವಾಂಬೆ ಇದನ್ನು ಸುಖಾಂತಗೊಳಿಸಿ ಕಾವ್ಯದ ಶೀರ್ಷಿಕೆಗೆ ಅನುಗುಣವಾಗಿ ಮಂಗಳಕರವಾಗಿ ಅಂತ್ಯಗೊಳಿಸುವಲ್ಲಿ ಈಕೆಯ ಮನೋಧರ್ಮವೇನೆಂಬುದು ಅರಿವಾಗುತ್ತದೆ. ಹೀಗೆ ಚೆಲುವಾಂಬೆ ಚಾರಿತ್ರಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಸ್ಥಳೀಯ ಅಂಶಗಳನ್ನು ತನ್ನ ಕಾವ್ಯದ ಒಡಲಲ್ಲಿ ಅಂತರ್ಗತಗೊಳಿಸಿ ವರನಂದೀ ಕಲ್ಯಾಣವನ್ನು ಕೌತುಕಮಯವಾಗಿ ಕಟ್ಟಿಕೊಟ್ಟಿದ್ದಾಳೆ.

ಈ ಕೃತಿಯನ್ನು ಇಡಿಯಾಗಿ ಅವಲೋಕಿಸಿದಾಗ ಮೈಸೂರು ರಾಜವಂಶದ ಕೆಲವು ಸಂಪ್ರದಾಯಗಳ ಬಗ್ಗೆ ತಿಳಿಯಲು ಸಹಾಯಕವಾಗಿದೆ. ರಾಜರ ಅಲಂಕಾರಗಳು, ಉಡುಗೆ–ತೊಡುಗೆ, ಅವರು ಮಕ್ಕಳನ್ನು ಬೆಳೆಸುತ್ತಿದ್ದ ರೀತಿ, ಅವರ ಆಟ–ಪಾಠಗಳು, ಮದುವೆ ಸಂಪ್ರದಾಯಗಳು, ವರೋಪಚಾರ, ತಾಯಿಯವಾತ್ಸಲ್ಯ, ಪುತ್ರಿವ್ಯಾಮೋಹ, ವರನಂದಿಯ ವಿರಹವೇದನೆ, ವೈಷ್ಣವ ಮತ್ತು ಮುಸ್ಲಿಂ ಧರ್ಮಗಳ ತಿಕ್ಕಾಟ, ವೈಷ್ಣವರ ಭಕ್ತಿಪಾರಮ್ಯ, ಮೊಗಲ್ ಸೈನ್ಯದದಾಳ ಮುಂತಾದವುಗಳ ಸಂಕ್ಷಿಪ್ತ ವಿವರವಿದೆ.

ಒಟ್ಟಿನಲ್ಲಿ ಚೆಲುವಾಂಬೆಯ 'ವರನಂದೀಕಲ್ಯಾಣ' ಒಂದು ಸರಳ, ಸುಂದರ ಲಲಿತಶೈಲಿಯ ಉತ್ತಮ ಕೃತಿ. ಹಾಗೂ ಈ ಕೃತಿಯಿಂದ ಅವಳ ಪಾಂಡಿತ್ಯ, ಸಹೃದಯತೆ, ಸಾಹಿತ್ಯ ರಸಿಕತೆಗಳು ವ್ಯಕ್ತವಾಗುತ್ತವೆ. ಅಲ್ಲದೆ ಕನ್ನಡ ಸಾಹಿತ್ಯಸಿರಿ ಹೆಚ್ಚಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

**ಕೊನೆಟಿಪ್ಪಣಿಗಳು**

೧. ಚೆಲುವಾಂಬೆಯ ಕೃತಿಗಳು, ಎಂ.ಪಿ.ಮಂಜಪ್ಪಶೆಟ್ಟಿ.(ಸಂ), ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ, ಮೈಸೂರು, ಪು.ಸಂ. ೫
೨. ಅದೇ, ಪು.ಸಂ ೫
೩. ಅದೇ, ಪು.ಸಂ ೬
೪. ಅದೇ, ಪು.ಸಂ ೯
೫. ಅದೇ, ಪು.ಸಂ ೧೪
೬. ಅದೇ, ಪು.ಸಂ ೧೮
೭. ಅದೇ, ಪು.ಸಂ ೩೩
೮. ಅದೇ, ಪು.ಸಂ ೫೭
೯. ಅದೇ, ಪು.ಸಂ ೬೫
೧೦.ಅದೇ, ಪು.ಸಂ ೭೨
೧೧.ಅದೇ, ಪು.ಸಂ ೭೫
೧೨.ಅದೇ, ಪು.ಸಂ ೭೫
೧೩.ಅದೇ, ಪು.ಸಂ ೮೮